**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕೊರಟಗೆರೆ**

**ಸಿ.ಸಿ. ನಂ. 735/2021**

| | | |
|---|---|---|
| ಹೆಸರು | : ಮಹೇಶ ಬಿ.ಜಿ | ಪಿಡಬ್ಲ್ಯೂ-11 |
| ತಂದೆಯ ಹೆಸರು | : ಗಣೇಶ್ ಆಚಾರಿ | ಸಿಡಬ್ಲ್ಯೂ-25 |
| ವಯಸ್ಸು | : 44 ವರ್ಷ | |
| ವೃತ್ತಿ | : ಪೋಲಿಸ್ ನಿರೀಕ್ಷಕರು | |
| ವಾಸ ಸ್ಥಳ | : ಮಳವಳ್ಳಿ | |

**ದಿಃ 20.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅಭಿಯೋಜಕರಿಂದ:**

ನಾನು ದಿಃ 21.09.2020 ರಿಂದ ಸೆಪ್ಟೆಂಬರ್ 2022 ರವರೆಗೆ ಸೋಮವಾರ ಪೇಟೆ ಪೋಲಿಸ್ ಠಾಣೆಯಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ26.05.2021 ರಂದು ಚಾಸಾ 24 ರವರಿಂದ ಕಡತವನ್ನು ಪಡೆದುಕೊಂಡಿರುತ್ತೇನೆ. ಅದೇ ದಿನಾಂಕದಂದು ಪ್ರಕರಣದಲ್ಲಿ ಮೃತರಾದ ಭುವನ್ ರವರ ಶವ ಪಂಚನಾಮೆಗಾಗಿ ಸೋಮವರಪೇಟೆ ಸರ್ಕಾರಿ ಆಸ್ಪತ್ರೆಯ ಶವಗಾರಕ್ಕ ತೆರಳಿ ಅಲ್ಲಿ ಚಾಸಾ 11 ರಿಂದ 13 ರವರಿಗೆ ನೋಟಿಪೀನ್ನು ಜಾರಿ ಮಾಡಿ ಶವಪಂಚನಾಮೆಯಲ್ಲಿ ಪಂಚರಾಗಲು ಸಹಕರಿಸಲು ಕೋರಿಕೊಂಡು ಸದರಿಯವರ ಸಮಾಕ್ಷಮ ಶವಪಂಚನಾಮೆಯನ್ನು ಜರುಗಿಸಿರುತ್ತೇನೆ. ಅದೇ ಕಾಲಕ್ಕಚಾಸಾ 14 ರಿಂದ 17 ರವರ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಶವಪಂಚನಾಮವೇಳೆಯಲ್ಲಿ ಛಾಯಾ ಚಿತ್ರವನ್ನು ತೆಗೆದಿರುತ್ತೇನೆ. ನಂತರ ವೈದ್ಯಾಧಿಕಾರಿಗಳಿಗೆ ಶವಪರೀಕ್ಷೆಯನ್ನು ಮಾಡಿ ವರದಿ ನೀಡುವಂತೆ ಮನವಿ ಪತ್ರವನ್ನು ಸಲ್ಲಿಸಿರುತ್ತೇನೆ. ನಂತರ ಶವ ಪರೀಕ್ಷೆಯ ನಂತರ ವೈದ್ಯಾಧಿಕಾರಿಗಳು ನೀಡಿದ ಶವವನ್ನು ಚಾಸಾ 14 ರವರಿಗೆ ನೀಡಿ ಸ್ವೀಕೃತಿ ಪಡೆದಿರುತ್ತೇನೆ. ಸದರಿ ಪಂಚನಾಮೆಯನ್ನು ಮುಂಜಾನೆ 8.30-10.30 ಗಂಟೆಯವರೆಗೆ ನಡೆಸಲಾಗಿರುತ್ತದೆ. ನಂತರ ಕೃತ್ಯ ನಡೆದ ಸ್ಥಳಕ್ಕ ಭೇಟಿ ನೀಡಿ ಸ್ಥಳವಾದಂತಹ ಗಣಗೂರು ಗ್ರಾಮದ

ಸರ್ಕಾರಿ ಪ್ರಾಥಮಿಕ ಶಾಲೆಯ ಮುಂದಿನ ರಸ್ತೆಯಾದಂತಹ ಗೋಣಿ ಮರೂರು, ಮಾಲಂಬಿ ಮುಖ್ಯ ರಸ್ತೆಯಾಗಿ ಈಶ್ವರ್ ರವರು ತೋರಿಸಿದ ಸ್ಥಳದಲ್ಲಿ ಚಾಸಾ 5 ಮತುತ 6 ರವರಿಗೆ ನೋಟೀಸನು ಜಾರಿ ಮಾಡಿ ಸ್ಥಳ ಮಹಜರನ್ನು ಜರುಗಿಸಲಾಗಿರುತ್ತದೆ. ಸದರಿ ಸ್ಥಳ ಮಹಜರನುನ ಮುಂಜಾನೆ 11.30-12.30 ರವರೆಗೆ ನಡೆಸಲಾಗಿದ್ದು ಅದೇ ಸಮಯಕ್ಕ ಕಚ್ಚ ನಕಾಶೆ ಮತ್ತು ಫೋಟೋವನ್ನು ತೆಗೆಯಲಾಗಿರುತ್ತದೆ. ನಂತರ ಕೃತ್ಯ ನಡೆದ ಸ್ಥಳದಿಂದ ಕೃತ್ಯದಲ್ಲಿ ಭಾಗಿ ಯಾದಂತಹ ಕೆಎ 12-9257 ಮತ್ತು ಪ್ಯಾಸೆಂಜರ್ ಆಟೋ ನಂಃ ಕೆ ಎ 12 ಎ 8880 ಪ್ಯಾಸೆಂಜರ್ ಆಟೋವನ್ನು ಪ್ರಕರಣದ ಸಾಕ್ಷಿದಾರಾರಾದ ಚಾಸಾ 4 ರವರು ತೋರಿಸಿಕೊಟ್ಟ ಮೇರೆಗೆ ಸೋಮವಾರ ಪೇಟೆ ಪೋಲಿಸ್ ಠಾಣಾ ಆವರಣದಲ್ಲಿ ಚಾಸಾ 7 ಮತು 8 ರವರ ಸಮಾಕ್ಷಮ ಅಮಾನತ್ತು ಮಹಜರನ್ನು ಜರುಗಿಸಿರುತ್ತೇನೆ ಸದರಿ ಮಹಜರನ್ನು ಮಧ್ಯಾಹ್ನ 2.00-3.00 ಗಂಟೆಯವರೆಗೆ ನಡೆಸಲಾಗಿರುತ್ತದೆ. ನಂತರ ಸದರಿ ವಶಪಡಿಸಿಕೊಂಡ ಆಟೋಗಳನ್ನು ಸ್ವತ್ತು ಪಟ್ಟಿ ಸಂಖ್ಯೆ 66/2021 ರಂತೆ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಂತರ ಸದರಿ ಕೃತ್ಯದಲ್ಲಿ ಭಾರಿಯಾದ ವಾಹನಗಳನ್ನು ಪರಿಶೀಲಿಸಿ ವರದಿ ನೀಡುವಂತೆ ಮೋಟರ್ ವಾಹನ ನಿರೀಕ್ಷಕರಿಗೆ ಮನವಿಯನ್ನು ಸಲಸಿಲಿಸಿರುತ್ತೇನೆ. ಅದೇ ದಿನಾಂಕದಂದುಚಾಸಾ 5 ರಿಂದ 8 ಮತ್ತು ಚಾಸಾ 11 ರಿಂದ 13 ಹಾಗೂ ಚಾಸಾ 22 ಮತ್ತು 23 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಸ್ವತ್ತು ಮಹಜರ್ ಸಮಯದಲ್ಲಿ ಛಾಯಾಚಿತ್ರವನ್ನು ತೆಗೆಯಲಾಗಿರುತ್ತದೆ. ದಿಃ 28.05.2021 ರಂದು ಸೋವಾವಾರಪೇಟೆಯ ವೈದ್ಯಾಧಿಕಾರಿಗಳಿಗೆ ಮೃತಪಟ್ಟ ಭುವನ್ ರವರ ಶವ ವರದಿ ಮತ್ತು ಗಾಯಾಳು ಚಾಸಾ 2 ರವರ ಗಾಯದ ಪ್ರಮಾಣ ಪತ್ರವನ್ನು ನೀಡುವಂತೆ ಮನವಿ ಸಲ್ಲಿಸಿರುತ್ತೇನೆ. ನಂತರ ಚಾಸಾ 2 ರವರ ಹೇಳಿಕೆಯನ್ನು ಮತ್ತು ಚಾಸಾ 9, 10 ಮತ್ತು 3 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 01.06.2021 ರಂದು ಮೃತನ ಪಿ ಎಮ್ ವರದಿಯನ್ನು ಮತ್ತು ಚಾಸಾ 2 ರವರ ಗಾಯಾದ ಪ್ರಮಾಣ ಪತ್ರುನ್ನು ಪಡೆದುಕೊಂಡಿರುತ್ತೇನೆ. ದಿಃ 03.06.2021 ರಂದು ಪ್ರಕರಣದ ಆರೋಪಿ ವಿಶ್ವನಾಥ್ ರವರಿಗೆ 133 ನೋಟೀಸನ್ನು ಜಾರಿ ಮಾಡಿದ್ದು ಸದರಿಯವರಿಂದ

ಉತ್ತರವನ್ನು ಪಡೆದುಕೊಂಡು ದಸ್ತ ಗಿರಿ ಕ್ರಮವನ್ನು ಜರುಗಿಸಿ ನಂತರ ಬಾಂಡ್ ಮುಚ್ಚಳಿಕೆಯನ್ನು ಪಡೆದುಕೊಂಡು ಬಿಡುಗಡೆ ಮಾಡಿರುತ್ತೇನೆ. ದಿಃ 09.06.2021 ರಂದು ಆರೋಪಿಗೆ ವಾಹನ ಬಿಡುಗಡೆಗೆ ಆದೇಶ ಪ್ರತಿ ನೀಡಿದ್ದಲು ನ್ಯಾಯಾಲಯದ ಆದೇಶದಂತೆ ಛಾಯಾಚಿತ್ರವನ್ನುತೆಗೆಸಿ ವಾಹನವನ್ನು ಬಿಡುಗಡೆ ಮಾಡಿರುತ್ತೇನೆ ನಂತರ ಅಪಘಾತದಲ್ಲಿ ಭಾಗಿಯಾದ ವಾಹನಗಳ ಐಎಂ ವಿ ವರದಿಗಳನ್ನು ಪಡೆದುಕೊಂಡಿರುತ್ತೇನೆ. ದಿಃ 24.06.2021 ರಂದು ಕೆಎ 12-ಎ 8880 ಪ್ಯಾಸೆಂಜರ್ ಆಟೋದ ಬಿ ಎಕ್ಸ್ಟ್ರಾಕ್ಟ್ ನ ಪ್ರತಿಯನ್ನು ಪಡೆದು ಪರಿಶೀಲಿಸಲಾಗಿ ಹರೀಶ್‌ವರಿಗೆ 133 ನೋಟೀ ಜಾರಿ ಮಾಡಿರುತ್ತೇನೆ.ನಂತರ ಸದರಿಯವರು 133 ನೋಟೀಸ್ ಗೆ ಉತ್ತರವನ್ನು ನೀಡಿದ್ದು ಮತ್ತು ಸದರಿಯವರ ಹೇಳಿಕೆಗಳನ್ನು ದಾಖಲಿಸಿರುತ್ತೇನೆ. ನಂತರ ಕೆಎ 12 ಎ 8880 ಪ್ಯಾಸೆಂಜರ್ ಆಟೋ ಚಾಲನೆ ಮಾಡುತ್ತಿದ್ದ ಚಾಸಾ 4 ರವರಿಗೆ ವಾಹನ ಚಾಲನಾ ಪರವಾನಗಿ ಇಲ್ಲದ ಕಾರಣ 1,000/- ರೂ. ದಂಡವನ್ನು ವಿಧಿಸಿ ಸ್ವೀಕೃತಿಯನ್ನು ಕಡತಕ್ಕ ಅಳವಡಿಸಿಕೊಂಡಿರುತ್ತೇನೆ. ಆರೋಪಿಯ ವಾಹನದ ದಾಖಲಾತಿಯನ್ನು ಪರಿಶೀಲಿಸಿದ ನಂತರ ಆರೋಪಿತನ ವಾಹನಕ್ಕ ಇನ್ಸುರೆನ್ಸ್ ಇಲ್ಲದೆ ಇರುವುದು ತನಿಖೆಯಲ್ಲಿ ಕಂಡುಬಂದಿರುತ್ತದೆ.ನಂತರ ಆರೋಪಿತ ಆರೋಪ ಸಾಬೀತಾದ ಕಾರಣ ನ್ಯಾಯಾಲಯಕ್ಕೆ ದೋೀಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಘಟನಾ ನಡೆದ ಸ್ಥಳದ ಮಹಜರ್ ಈಗಾಗಲೇ ನಿಪಿ 2 ಸಾಕ್ಷಿಯ ಸಹಿ ನಿಪಿ 2(ಸಿ) ಎಂದು ಗುರುತಿಸಲಾಗಿದೆ. ಸ್ವತ್ತು ಅಮಾನತು ಮಹಜರ್ ಈಗಾಗಲೇ ನಿಪಿ 6 ಮತ್ತು ಸಾಕ್ಷಿಯ ಸಹಿ ನಿಪಿ 6(ಬಿ) ಎಂದು ಗುರುತಿಸಲಾಯಿುತು. ಪ್ರಾದೇಶಿಕ ಸಾರಿಗೆ ಅಧಿಕಾರಿ ಗಳು ೀಡಿರುವಂತಹ ನೋಟೀಸ್ ಈಗಾಗಲೇ ನಿಪಿ 7 ಸಾಕ್ಷಿಯ ಸಹಿ ನಿಪಿ 7(ಎ) ಎಂದು ಗುರುತಿಸಲಾಯಿುುತು.ಐ ಎಮ್ ವಿ ರಿಪೋರ್ಟ್( ನಿಪಿ 8 ಮತ್ತು ಸಾಕ್ಷಿಯ ಸಹಿ ನಿಪಿ 8(ಎ) , ಅಪಘಾತ ಸ್ಥಳದ ನಕ್ಷೆ ನಿಪಿ 9 ಮತ್ತು ಸಾಕ್ಷಿಯ ಸಹಿ 9(ಎ) ಮತ್ತು ಮಹಜರ್ ಕಾಲದಲ್ಲಿ ತೆಗೆದ ಫೋಟೋಗಳು ನಿಪಿ 10, ಅಮಾನತು ಮಹಜರ್ ಕಾಲದಲ್ಲಿ ತೆಗೆದ ಫೋಟೋ ನಿಪಿ 11, 133 ನೋಟೀಸ್ ನಿಪಿ 12, ಪ್ರತ್ಯುತ್ತರ ನೋಟೀಸ್ ನಿಪಿ 13, ನೋೀಟೀಸ್ ನಿಪಿ 14, ಪ್ರತ್ಯುತ್ತರ ನಿಪಿ 15, ಶವತನಿಖಾ ವರದಿ ನಿಪಿ 16, ಸಾಕ್ಷಿಯ ಸಹಿ ನಿಪಿ 16(ಎ)

ಎಂದು,ಸ್ವೀಕೃತಿ ನಿಪಿ 17, ಸಾರ್ವಜನಿಕ ಆಸ್ಪತ್ರೆಗೆ ನೀಡಿರುವಂತಹ ಒಂದು ಮನವಿ ನಿಪಿ 18, ಶವ ಪರೀಕ್ಷಾ ವರದಿ ನಿಪಿ 19, ಗಾಯದ ಪ್ರಮಾಣ ಪತ್ರ ನಿಪಿ 20, ಸ್ವತ್ತು ಬಿಡುಗಡೆ ಸಂಬಂಧದಲ್ಲಿ ತೆಗೆದ ಫೋಟೋ ನಿಪಿ 21, ಕಲಂ 65 ಬಿ ದೃಢೀಕರಣ ಪತ್ರ ನಿಪಿ 22, ವಾಹನದ ಬಿ ಎಕ್ಸ್ಟ್ರಾಕ್ಟ್ ರಿಪೋರ್ಟ್ ನಿಪಿ 23 ಎ ಂದು ಗುರುತಿಸಲಾಯಿುತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**<u>ಪಾಟೀ ಸವಾಲುಃ ಶ್ರೀ ಟಿಜೆಪಿ ವಕೀಲರಿಂದ:</u>**

ಘಟನಾ ನಡೆದ ಸಮಯದಲ್ಲಿ ಕೋವಿಡ್ ಇತ್ತು ಎಂದರೆ ಸಾಕ್ಷಿ ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಪಂಚಾಯಿತಿಯಿಂದ ಅನುಮತಿ ಪತ್ರ ಪಡೆದು ವಾಹನ ಚಾಲನೆ ಮಾಡಬೇಕಾಗಿತ್ತು ಎಂದರೆ ಸರಿಯಲ್ಲ. ಪ್ಯಾಸೆಂಜರ್ ಆಟೋದಲ್ಲಿ ಚಾಲಕನನ್ನು ಹೊರುತಪಡಿಸಿ ಉಳಿದ 3 ಜನ ಪ್ರಯಾಣಿಸಬೇಕಾಗಿತ್ತು ಎಂದರೆ ಸಾಕ್ಷಿಯು ಆರ್ ಸಿ ಪುಸ್ತಕದಲ್ಲಿ ನಮೂದಿಸಿದ ಜನರು ಪ್ರಯಾಣಿಸಿರುತ್ತಾರೆ. ಪ್ಯಾಸೆಂಜರ್ ಆಟೋದಲ್ಲಿ ಎಷ್ಟು ಜನ ಪ್ರಯಾಣಿಸಿರುತ್ತಾರೆ ಎಂದರೆ ಚಾಲಕನನ್ನು ಹೊರತುಪಡಿಸಿ 5 ಜನ ಪ್ರಯಾಣಿಸುತ್ತಿದ್ದರು ಅದರಲ್ಲಿ ಇಬ್ಬರು ಮಕ್ಕಳು ಇದ್ದರು. ಮೃತ ವ್ಯಕ್ತಿಯ ಯಾವ ಭಾಗದಲ್ಲಿ ಆಟೋದಲ್ಲಿ ಕೂತಿದ್ದರು ಎಂದರೆ ಸಾಕ್ಷಿಯು ಹಿಂಬದಿಯ ಪ್ಯಾಸಂಜರ್ ಸೀಟ್ನ ಬಲಭಾಗದಲ್ಲಿ ಕೂತಿರುತ್ತಾರೆ ಎನ್ನುತ್ತಾರೆ. ಈ ಪ್ಯಾಸೆಂಜರ್ ಆಟೋಗೆ ಕೇವಲ 13 ಕಿ.ಮೀ ಮಾತ್ರ ಪ್ರಯಾಣಿಸಲು ಅನುಮತಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಅಮಾನತು ಪಡಿಸಿಕೊಂಡ ವಾಹನದಲ್ಲಿ ಜಕಂ ಆಗಿರುವ ಭಾಗ ಕಂಡುಬಂದಿರುತ್ತದೆಯಾ ಎಂದರೆ ಸಾಕ್ಷಿಯು ಕಂಡುಬಂದಿರುತ್ತದೆ ಎಂದು ನುಡಿಯುತ್ತಾರೆ. ವಾಹನದ ಯಾವ ಭಾಗ ಜಕಂ ಆಗಿರುತ್ತದೆ ಎಂದರೆ ಬಲಭಾಗದ ಕನ್ನಡಿ ಯತ್ತಿರ ಜಕಂ ಮತ್ತು ಬಲಭಾಗದ ಕಡೆ ಆಗಿರುತ್ತದೆ. ನಿಪಿ 11 ರ ಭಾವಚಿತ್ರದಲ್ಲಿ ಯಾವುದೇ ಜಕಂ ಆಗಿರುವುದು ಕಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ದಿನಾಂಕದಂದು ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ ಮತ್ತು ಮಹಜರ್ ಮಾಡಿರುವುದಿಲ್ಲ. ಯಾವುದೇ ವಾಹನಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲಲ. ಸಾಕ್ಷಿದಾರರ ಹೇಳಿಕೆಯನ್ನು

ಸಹ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿದಾರರಿಗೆ ಪರಿಹಾರವನ್ನು ಒದಗಿಸಲು ಸುಳ್ಳು ದೋಷಾ ರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲಲ. ಮುಖ್ಯ ವಿಚಾರಣೆಯಲ್ಲಿರುವ ಅಂಶಗಳು ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-
ಸಿ.ಜೆ.ಮತ್ತು ಪ್ರ.ದ.ನ್ಯಾ .ದಂ
ಸೋಮವಾರಪೇಟೆ